ನಬಾರ್ಡ್ ಯೋಜನೆಯ ರಸ್ತೆಗಳು

2416 (3022) : ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಬಾರ್ಡ್ ಯೋಜನೆಯ ರಸ್ತೆಗಳು 13 ಅಡಿ ಡಾಂಬರೀಕರಣ ಮಾಡಿ ಅದರ ಎರಡು ಬದಿಯಲ್ಲಿ 3, 3 ಅಡಿ ಕೇವಲ ಮಣ್ಣು ಕೆಲಸ ಮಾಡಿ ಆರು ಅಂಗುಲ ಮೊರಂ ಚಲ್ಲಿಸಿದರೆ ಆ ಪಕ್ಕದ ರಸ್ತೆ ಕುಸಿದು ಹೋಗುವುದಿಲ್ಲವೇ;

ಆ) ಇದರಿಂದ ಹಣ ನಷ್ಟವಾಗಿ ಪುನಃ ರಸ್ತೆ ನಿರ್ಮಾಣ ಮಾಡಬೇಕಾಗುವುದಿಲ್ಲವೇ;

ಇ) ಈ ರಸ್ತೆಯ ಎರಡು ಬದಿಗಳ 3,3 ಅಡಿ ಮೊರಂ ಬೇಸ್‌ಫೂಟ್ ನೀಡಿ ಪಕ್ಕಾ ರಸ್ತೆ ಮಾಡಬಾರದೇಕೆ;

ಈ) ನಬಾರ್ಡ್‌ನವರು ಮಂಜೂರಿ ನೀಡಿಲ್ಲವೆಂದರೆ ಸರ್ಕಾರ ಇದರ ಪರ್ಯಾಯ ವ್ಯವಸ್ಥೆ ಮಾಡಿ ಅನುಕೂಲ ಮಾಡಬಾರದೇಕೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ನಬಾರ್ಡ್ ಯೋಜನೆಯಡಿ ಎಲ್ಲಾ ರಸ್ತೆಗಳನ್ನು ಇಂಡಿಯನ್ ರೋಡ್ ಕಾಂಗ್ರೆಸ್ ಮಾನದಂಡದಂತೆ ಏಕಪಥ ರಸ್ತೆಯಾಗಿ (3.75 ಮೀ) ಅಗಲಕ್ಕೆ ಡಾಂಬರು ಮಾಡಿ ಇಕ್ಕೆಲಗಳಲ್ಲಿ ಮುರ್ರಂ ಅನ್ನು ಹರಡಲಾಗುತ್ತಿದೆ. ವಾಹನಗಳು ಡಾಂಬರು ಮೇಲ್ಮೈ ಮೇಲೆ ಮಾತ್ರ ಚಲಿಸಬೇಕಿದ್ದು, ಇಕ್ಕೆಲಗಳನ್ನು ವಾಹನ ಸಂಚಾರಕ್ಕೆ ನಿರ್ಮಾಣ ಮಾಡುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ರಸ್ತೆ ನಿರ್ಮಾಣವನ್ನು ಮೇಲೆ ತಿಳಿಸಿದಂತೆ ಏಕಪಥವಾಗಿ ಮಾತ್ರ ನಿರ್ಮಿಸಲಾಗುತ್ತಿದೆ.

ಈ) ನಬಾರ್ಡ್‌ನವರು ಇಂಡಿಯನ್ ರೋಡ್ ಕಾಂಗ್ರೆಸ್ ಮಾನದಂಡದಂತೆ ರಸ್ತೆ ನಿರ್ಮಾಣಕ್ಕೆ ಅನುಮೋದನೆ ನೀಡುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕೆ.ಆರ್. ನಗರ ತಾಲ್ಲೂಕಿನಲ್ಲಿ ರಸ್ತೆ ಅಭಿವೃದ್ಧಿ

2417 (2806) : ಶ್ರೀ ಬಸವರಾಜು ಹೆಸ್.ಸಿ. (ಪಿರಿಯಾಪಟ್ಟಣ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೆ.ಆರ್. ನಗರ ತಾಲ್ಲೂಕು ಚುಂಚನಕಟ್ಟೆ ಹೋಬಳಿಗೆ ಸೇರಿದ ಕೆ.ಆರ್. ರಸ್ತೆಯಲ್ಲಿ 23 ಕಿ.ಮೀ. ನಿಂದ ಮುಂದಕ್ಕೆ ಮುಖ್ಯ ಮಂತ್ರಿಗಳ ವಿಶೇಷ ಅನುದಾನದಡಿಯಲ್ಲಿ 40 ಲಕ್ಷ ರೂ.ಗಳು ಮಂಜೂರಾಗಿದ್ದ ಕಾಮಗಾರಿಯು ಯಾವ ಹಂತದಲ್ಲಿದೆ;

ಆ) ಕಾಮಗಾರಿ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಬಂದಿದ್ದಲ್ಲಿ, ವಿಳಂಬಕ್ಕೆ ಕಾರಣರಾಗಿರುವವರ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮ ಏನು;

ಈ) ಕಾಮಗಾರಿ ಪೂರ್ಣಗೊಳಿಸಲು ಕೈಗೊಂಡ ಕ್ರಮಗಳಾವುವು;

ಉ) ಎಷ್ಟು ಒಳಗಳಲ್ಲಿ ಕಾಮಗಾರಿ ಪೂರ್ಣಗೊಳಿಸಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಕಿಮೀ 23.00 ರಿಂದ 31.20 ಕಿಮೀ ವರೆಗೆ ಮೆಟಲಿಂಗ್, ಏರಿ ನಿರ್ಮಾಣ ಕಾಮಗಾರಿಗಳು, ಸಫೇಸ್, ಡ್ರೆಸಿಂಗ್ ಪೂರ್ಣಗೊಂಡಿದ್ದು ಡಾಂಬರೀಕರಣವಾಗ ಬೇಕಾಗಿದೆ.